ನಾರಾಯಣಾಚಾರ್ಯರ ಸಂಕಟವೂ ಸಂಕಟವೇ. ನಾನು ಸಂಗೀತಗಾರ ಸುಬ್ಬಣ್ಣನಾಗಬೇಕು ಎಂಬ ಸುಬ್ಬಣ್ಣನ ಸಂಕಟವೂ ಸಂಕಟವೇ. ಕಡೆಗೂ ಏನೆಲ್ಲ ಕಳೆದುಕೊಂಡೂ ಆತ ಸುಬ್ಬಣ್ಣನಾದ. ಸುನಂದಾ ಬೆಳಗಾಂವಕರರ 'ನಾ ಸು' ಕಾದಂಬರಿಯು, ವಿದ್ಯಾಭ್ಯಾಸದಲ್ಲಿ ಹಿಂದೆಯಿದ್ದ ಮಗ ನಾರಾಯಣನನ್ನು ಪರಮ ವೈರಿಯೆಂದು ಭಾವಿಸಿ 'ನಾಯಿಸೂಳೆಮಗ' ಎಂದು ಕರೆಯುತ್ತಿದ್ದ ಅಪ್ಪನ ವೃದ್ಧಾಪ್ಯಕ್ಕೆ ಒದಗುವವನು ಇದೇ 'ನಾ ಸು'. ಈ ಎರಡೂ ಕಾದಂಬರಿಗಳಲ್ಲಿ ವ್ಯಕ್ತಿತ್ವ ನಿರ್ಮಿತಿಯ ಛಲ ಗೆಲ್ಲುತ್ತದೆ. ಆದರೆ ಈ ಕೃತಿಯಲ್ಲಿ ಆದರ್ಶ ವಾಸ್ತವದೆದುರು ಕುಸಿಯುತ್ತದೆ. ಅಣ್ಣ ಪ್ರಭುವಿನ ಗುಣಗಾನದ ಸುಳಿಯಿಂದ ಎದ್ದು ಬಾಳಲು ಮೂರ್ತಿ ಅದೆಷ್ಟೋ ಪ್ರಯತ್ನಿಸಿದ. ಶಾಲೆ ಬಿಟ್ಟ 10 ವರ್ಷಗಳ ನಂತರ ಕಾಲೇಜಿಗೆ ಹೋದ. ಡಿಗ್ರಿ ಮಾಡಿದ. ತನ್ನ ಪದವಿಗೆ ಸರ್ಕಾರಿ ಉದ್ಯೋಗವಿಲ್ಲದೆ ದಿಕ್ಕೆಟ್ಟ, ಬೇಸಾಯ ಮಾಡಿದ. 'ಅವರವರ ಬೆಲೆ ಅವರವರಿಗಿರ್ತದಪ್ಪ' ಎಂದು ಹೇಳುವ ಒಬ್ಬರೂ ದಿಕ್ಕಿಲ್ಲದೆ ಹತಾಶನಾದ. ಮಗನನ್ನು ಹೆಣ್ಣುದೆವ್ವದಂತೆ ಕಾಡುವ ಅವ್ವ. ಒಂದು ಊಟ ಉಂಡು ಬರಲು ಅವ್ವ ಅದೆಷ್ಟು ಕಿಟಿಪಿಟಿ ಮಾಡುತ್ತಾಳೆ! ಒಂದು ಸಲಕ್ಕೆ ಐದಾರು ಮರಿ ಹಾಕೋ ಹಂದಿ - ಬೆಕ್ಕುಗಳು ಮರಿಗಳನ್ನ ಒಂದೇ ಆಗಿ ನೋಡ್ತವೆ. ಈ ಅವ್ವನಿಗೇನಾಗಿದೆ ಅನ್ನಿಸಿತ್ತು ಮೂರ್ತಿಗೆ. 'ಪ್ರಭೂ ಕೆಟ್ಟೋನಾದ್ರೂ ಆಗಿರ್ಬಾರ್ದಿತ್ತೇ?' ಹಾಗಿದ್ದರೆ ಜನ, ತಾನೇ ಒಳ್ಳೆಯವನು ಅಂತಾದ್ರೂ ಅಂತಿದ್ರು. ವಿದೇಶಿ ವ್ಯಾಸಂಗ ಮುಗಿಸಿ ಪ್ರಭು ಮರಳುತ್ತಿರುವ ಸುದ್ದಿಯ ಕಾರಣದ ವಾತಾವರಣ ಮೂರ್ತಿಯನ್ನು ಬದುಕುವ ಹಕ್ಕಿಲ್ಲದವನನ್ನಾಗಿಸುತ್ತದೆ. 'ಪ್ರಭು ಬರೋಕು ಮುಂಚೇ ಈ ಜನ ನನ್ನ ಮಾತಿನಿಂದ್ಲೇ ಮಣ್ಣ ಮಾಡಿಬಿಡ್ತಾರೆ' ಎಂಬ ಭೀತಸ್ಥಿತಿ ತಲುಪಿದ ಮೂರ್ತಿ ಕೆಡಗೂ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಆ ಸನ್ನಿವೇಶ ಆತ್ಮಹತ್ಯೆಯ ಹೆಸರಿನ ವ್ಯವಸ್ಥಿತ ಕೊಲೆಯ ದಾರುಣ ಚಿತ್ರಣವಾಗಿದೆ.

ಈ ಕಾದಂಬರಿ ಸ್ಥಾಪಿತ ಮೆಟಾಫರ್‌ಗಳನ್ನು ಒಡೆಯುತ್ತದೆ. ತಾಯ್ತನ, ಕುಟುಂಬ, ನನ್ನೂರು ಎಂಬೆಲ್ಲ ಸುರಕ್ಷಿತ ಭ್ರಮೆಗಳನ್ನು ಕಳಚಿಸುತ್ತದೆ. ಬದುಕಿನ ಸೋಲು-ಗೆಲುವುಗಳನ್ನು ಕಾಣುವುದು ಉಸಿರು ನಿಲ್ಲುವವರೆಗೂ ಅಸಾಧ್ಯವೇ. ಬಡತನ ಸಿರಿತನಗಳು ಬಾಳ್ವೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆಯೇ? ಹಾಗಿದ್ದರೆ ಶ್ರೀಮಂತಿಕೆಯಲ್ಲಿಯೂ ಬಾಳಲಾಗದ ಸ್ಥಿತಿ ಹೇಗೆ ನಿರ್ಮಾಣವಾಯಿತು ? ಶಿಕ್ಷಣ-ಉದ್ಯೋಗಗಳು ಮುಂದಿನ ಘನತೆಯ ಬಾಳಿಗೆ ಕಾರಣವಾಗಬಲ್ಲುದೇ? ಈ ಕಾದಂಬರಿಯ ಓದು, ಶೈಲ ಎಂಬ ಮುದ್ದು ಮಗುವಿನೊಂದಿಗೆ ಬೆರೆತು ಸಾಗುತ್ತದೆ. ಶೈಲನೀಗ ವೈದ್ಯ. ಉದ್ಯೋಗಸ್ಥ. ಆಧುನಿಕ ಬದುಕಿನ ಎಲ್ಲ ಅಗತ್ಯಗಳನ್ನೂ ಪಡೆಯಬಲ್ಲವ. ಆದರೆ ಕೌಟುಂಬಿಕ ಸಂಬಂಧದ ಉರುಲಿನಿಂದ ಪಾರುಗಾಣಲಾಗದೆ ನಿದ್ದೆ ಮಾತ್ರೆ, ಇಂಜಕ್ಷನ್‌ಗಳ ಸ್ವಹಿಂಸೆಯಿಂದ ಜೀವಂತ ದುರ್ಬಲ ಶವವಾಗುತ್ತಾನೆ. ಅವನನ್ನು ಹುಟ್ಟಿದ ಮನೆ ಜಗುಲಿಗೆ 'ತಂದು ಹಾಕುವ' ಸಂದರ್ಭದಲ್ಲಿ ಓದುಗ ಪ್ರಜ್ಞೆ ತಳಮಳಿಸುತ್ತದೆ. ಕೆ.ವಿ. ಅಯ್ಯರ್ ಅವರ ರೂಪದರ್ಶಿ ಕಾದಂಬರಿಯ ಅರ್ನೆಸ್ಟ್ ಎಂಬ ಮುದ್ದು ಮಗು, ಗರಿಬಾಲ್ಡಿ ಎಂಬ ವಿಕಾರ ವಿಕೃತನಾಗಿ ಬದಲಾಗಿದ್ದನ್ನು ಕಂಡಹಾಗೆ.

ಕಾದಂಬರಿ ಬದುಕಿನ ಬಗ್ಗೆ ಕಡು ಎಚ್ಚರವನ್ನು ಕಾಣಿಸುತ್ತದೆ. ಮರ ತನ್ನ ಪ್ರಯತ್ನದಿಂದ ತಾನು ಬೆಳೆಯುತ್ತದೆ. ಮಣ್ಣಿನಲ್ಲೇ ಸೇರಿದ್ದ ಗೆದ್ದಲು, ಜೀವವನ್ನು ಮುಕ್ಕಿ ಬದುಕಿನ ತ್ರಾಣವನ್ನು ಹಿಂಡುವಾಗ ಮರಕ್ಕೆ ಪಾರಾಗುವ ದಾರಿ ಏನಿದೆ? ಮಣ್ಣಿನಿಂದ ಬೇರುಕಿತ್ತಲಾಗದ ಮರ, ಕುಟುಂಬದಿಂದ ಬೇರುಕಿತ್ತುಕೊಳ್ಳಲು ಆಗದ ಮನುಷ್ಯರು ಎರಡೂ ಒಂದೇ. ಈ ಬದುಕು ಯಾಕೆ ಮಬ್ಬಿನಿಂದ ಮಬ್ಬಿಗೆ ಹರಿಯುತ್ತದೆ? ವ್ಯವಧಾನದ ಸ್ವಯಂದೀಪಕವಾದ ಆತ್ಮಾನುಸಂಧಾನ ಇಲ್ಲದಿದ್ದರೆ, ಆತ್ಮಗೌರವದ ಎಚ್ಚರವಿರದಿದ್ದರೆ ಮತ್ತದೇ ಪುನರಾವರ್ತನೆ. ಹುಟ್ಟು ಸಾವುಗಳ ನಿರಂತರತೆ ದಿನದಿನದ ಜೈವಿಕ ಸತ್ಯವಷ್ಟೇ ಅಲ್ಲ, ಅದು ಭಾವನಾತ್ಮಕ ಸತ್ಯವೂ ಹೌದು. ಇಲ್ಲಿಯ ಎಲ್ಲ ಪಾತ್ರಗಳ ಸೋಲಿಗೂ ವ್ಯವಸ್ಥೆಯ ಕಾರಣವಿದೆ. ಅಷ್ಟೇ ವೈಯಕ್ತಿಕ ಕಾರಣವೂ ಇದೆ. ಯಾರಲ್ಲಿ ಬೇಕಾದರೂ ಯಾವಾಗ ಬೇಕಾದರೂ ಹುಟ್ಟಿಬಡುವ ಸ್ವಾರ್ಥ, ಅಸೂಯೆ, ಸಣ್ಣತನಗಳು ಪರಿಣಾಮದಲ್ಲಿ ಎಷ್ಟು ಭಯಾನಕವಾಗಿರುತ್ತದೆನ್ನುವುದನ್ನು ಶ್ರದ್ಧೆಯಿಂದ ಕಾಣಿಸುವ ಕಾದಂಬರಿಯಿದು. ಪ್ರತಿ ಪದದ ಮೌನದಲ್ಲೂ, ಇರುವುದೊಂದೇ ಬಾಳು ಎಂಬ ಎಚ್ಚರವನ್ನೂ. ●